**All India Radio: Bangalore**
**National Bulletin In Kannada**
**19.11.2025 1.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**19.11.2025 1.10 p.m.**

**<><><><>**

ಮುಖ್ಯಾಂಶಗಳು

1. ಪುಟ್ಟಪರ್ತಿಯಲ್ಲಿ ಸತ್ಯ ಸಾಯಿ ಬಾಬಾ ಶತಮಾನೋತ್ಸವದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗಿ; ಶಿಕ್ಷಣ, ಆರೋಗ್ಯ ಸೇವೆ ಸ್ಮರಣೆ
2. ಬಿಹಾರದಲ್ಲಿ ಚುರುಕುಗೊಂಡ ನೂತನ ಸರ್ಕಾರ ರಚನೆ ಪ್ರಕ್ರಿಯೆ; ಎನ್‌ಡಿಎ ನಾಯಕರಾಗಿ ನಿತೀಶ್ ಕುಮಾರ್ ಆಯ್ಕೆ
3. ಕ್ಷಯರೋಗ ವಿರುದ್ಧದ ಹೋರಾಟದಲ್ಲಿ ಭಾರತದಲ್ಲಿ ಗಮನಾರ್ಹ ಪ್ರಗತಿ - ಡಬ್ಲ್ಯುಎಚ್‌ಒ ಶ್ಲಾಘನೆ
4. ಗೋವಾದಲ್ಲಿ ನಾಳೆಯಿಂದ ೫೬ನೇ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ
5. ಫೀಫಾ ವಿಶ್ವಕಪ್ ಫುಟ್‌ಬಾಲ್‌ಗೆ ಅರ್ಹತೆ ಪಡೆದ ಜಗತ್ತಿನ ಅತ್ಯಂತ ಕಿರಿಯ ಕೆರಿಬಿಯನ್ ದ್ವೀಪ ರಾಷ್ಟ್ರ ಕುರಾಕಾವೊ

<><><><>

ಪ್ರಧಾನಿ ನರೇಂದ್ರ ಮೋದಿ ಇಂದು ಆಂಧ್ರಪ್ರದೇಶ ಮತ್ತು ತಮಿಳುನಾಡಿಗೆ ಭೇಟಿ ನೀಡಲಿದ್ದಾರೆ. ಮೊದಲಿಗೆ ಆಂಧ್ರಪ್ರದೇಶದ ಪುಟ್ಟಪರ್ತಿಗೆ ಆಗಮಿಸಿದ ಪ್ರಧಾನಿ ಅವರನ್ನು ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಹಾಗೂ ಉಪಮುಖ್ಯಮಂತ್ರಿ ಕೆ.ಪವನ್ ಕಲ್ಯಾಣ್ ಮತ್ತಿತರರು ಆತ್ಮೀಯವಾಗಿ ಬರಮಾಡಿಕೊಂಡರು. ಈ ಸಂದರ್ಭದಲ್ಲಿ ಚಿತ್ರನಟಿ ಐಶ್ವರ್ಯ ರೈ, ಮಾಜಿ ಕ್ರಿಕೆಟಿಗ ಸಚಿನ್ ತೆಂಡಲ್ಕೂರ್ ಉಪಸ್ಥಿತರಿದ್ದರು. ಭಗವಾನ್ ಶ್ರೀ ಸತ್ಯ ಸಾಯಿ ಬಾಬಾ ಅವರ ಪವಿತ್ರ ದೇವಾಲಯ ಮತ್ತು ಮಹಾಸಮಾಧಿ ಸ್ಥಳಕ್ಕೆ ತೆರಳಿ ನಮನ ಸಲ್ಲಿಸಲಿದರು. ನಂತರ ಅವರು ಸತ್ಯಸಾಯಿ ಬಾಬಾ ಅವರ ಶತಮಾನೋತ್ಸವ ಆಚರಣೆಯಲ್ಲಿ ಭಾಗವಹಿಸಿದರು. ಅವರ ಸ್ಮರಣಾರ್ಥ ನಾಣ್ಯ ಮತ್ತು ಅಂಚೆಚೀಟಿಗಳನ್ನು ಬಿಡುಗಡೆ ಮಾಡಿದರು. ನಂತರ

ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ, ಸತ್ಯ ಸಾಯಿ ಬಾಬಾ ಅವರ ಜನ್ಮ ಶತಮಾನೋತ್ಸವ ಕೇವಲ ಉತ್ಸವಲ್ಲ, ಇದು ದಿವ್ಯ ವರದಾನವಾಗಿದೆ. ಸಾಯಿಬಾಬಾ ಅವರು ಶಿಕ್ಷಣ, ಆರೋಗ್ಯ, ಕುಡಿಯುವ ನೀರು ಸೇರಿದಂತೆ ಹಲವಾರು ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಹೊಸ ಸಂಕಲ್ಪದೊಂದಿಗೆ ಮಹೋತ್ಸವವನ್ನು ಆಚರಿಸಬೇಕಾಗಿದೆ. ಅವರ ಜೀವನ ವಸುದೈವ ಕುಟುಂಬಕಂ ಮೇಲೆ ನಿಂತಿದೆ ಎಂದರು. ನಂತರ ಪ್ರಧಾನಿ, ತಮಿಳುನಾಡಿನ ಕೊಯಮತ್ತೂರಿಗೆ ಪ್ರಯಾಣಿಸಲಿದ್ದಾರೆ. ಅಲ್ಲಿ ಅವರು ದಕ್ಷಿಣ ಭಾರತ ನೈಸರ್ಗಿಕ ಕೃಷಿ ಶೃಂಗಸಭೆಯನ್ನು ಉದ್ಘಾಟಿಸಿ, ರೈತರೊಂದಿಗೆ ಸಂವಾದ ನಡೆಸಿ ಹತ್ತು ಮಂದಿ ರೈತರನ್ನು ಗೌರವಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಪ್ರಧಾನಿ, ೧೮ ಸಾವಿರದ ೬ ಕೋಟಿ ರೂಪಾಯಿ ಮೊತ್ತದ ಪಿಎಂ-ಕಿಸಾನ್ ನ ೨೧ನೇ ಕಂತನ್ನು ರೈತ ಫಲಾನುಭವಿಗಳಿಗೆ ಬಿಡುಗಡೆ ಮಾಡಲಿದ್ದಾರೆ.

<><><><>

ಬಿಹಾರದಲ್ಲಿ ನೂತನ ಸರ್ಕಾರ ರಚನೆ ಪ್ರಕ್ರಿಯೆ ಆರಂಭವಾಗಿದೆ. ಎನ್.ಡಿ.ಎ ಮೈತ್ರಿಕೂಟಕ್ಕೆ ಹೊಸದಾಗಿ ಆಯ್ಕೆಯಾದ ಶಾಸಕರು ಇಂದು ಪಾಟ್ನಾದಲ್ಲಿ ಸಭೆ ಸೇರಿ ಜೆಡಿಯು ಮುಖಂಡ ನಿತೀಶ್ ಕುಮಾರ್ ಅವರನ್ನು ತಮ್ಮ ನಾಯಕರಾಗಿ ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ. ಐದು ಎನ್‌ಡಿಎ ಪಕ್ಷಗಳಾದ - ಬಿಜೆಪಿ, ಸಂಯುಕ್ತ ಜನತಾದಳ, ಲೋಕ ಜನಶಕ್ತಿ ಪಕ್ಷ, ಹಿಂದೂಸ್ತಾನಿ ಅವಾಮ್ ಮೋರ್ಚಾ ಮತ್ತು ರಾಷ್ಟ್ರೀಯ ಲೋಕ ಮೋರ್ಚಾ - ಗಳಿಂದ ಹೊಸದಾಗಿ ಆಯ್ಕೆಯಾದ ಶಾಸಕರು ಸಭೆಯಲ್ಲಿ ಭಾಗವಹಿಸಿದರು. ಶೀಘ್ರದಲ್ಲೇ ನಿತೀಶ್ ಕುಮಾರ್ ೧೦ನೇ ಬಾರಿಗೆ ಮುಖ್ಯಮಂತ್ರಿಯಾಗಿ ಪದಗ್ರಹ ಮಾಡಲಿದ್ದಾರೆ.

<><><><>

ಕ್ಷಯರೋಗ-ಟಿಬಿ ವಿರುದ್ಧದ ಹೋರಾಟದಲ್ಲಿ ಭಾರತವು ಗಮನಾರ್ಹ ಪ್ರಗತಿ ಸಾಧಿಸಿದ ಕಾರಣಕ್ಕಾಗಿ ವಿಶ್ವ ಆರೋಗ್ಯ ಸಂಸ್ಥೆ-ಡ.ಬ್ಲ್ಯು.ಎಚ್.ಒ ಭಾರತವನ್ನು ಶ್ಲಾಘಿಸಿದೆ. ಭಾರತದಲ್ಲಿ ಟಿಬಿ ಪ್ರಕರಣಗಳ ಪತ್ತೆ ಅಂತರ ಕಡಿಮೆಯಾಗಿದ್ದು, ಟಿಬಿ ಸಂಬಂಧಿತ ಸಾವುಗಳಲ್ಲಿ ಸಂಖ್ಯೆ ಕಡಿಮೆಯಾಗಿದೆ ಎಂದು ಡಬ್ಲ್ಯು.ಎಚ್‌ಒ ತಿಳಿಸಿದೆ. ಆಗ್ನೇಯ ಏಷ್ಯಾ ಪ್ರದೇಶದಾದ್ಯಂತ ಕ್ಷಯಾರೋಗ ಪ್ರಕರಣಗಳ ಸಂಖ್ಯೆಯಲ್ಲಿ ಬದಲಾಗುತ್ತಿದ್ದರೂ, ಬಾಂಗ್ಲಾದೇಶ, ಭೂತಾನ್, ನೇಪಾಳ ಮತ್ತು ಥೈಲ್ಯಾಂಡ್ ಜೊತೆಗೆ ಭಾರತವು ಸ್ಥಿರ ಪ್ರಗತಿಯನ್ನು ಸಾಧಿಸಿದೆ ಮತ್ತು ಟಿಬಿ-ಸಂಬಂಧಿತ

ಮರಣ ಪ್ರಮಾಣ ಕಡಿಮೆಯಾಗಿದೆ ಎಂದು ಡಬ್ಲ್ಯುಎಚ್‌ಒನ ಜಾಗತಿಕ ಕ್ಷಯರೋಗ ವರದಿ ಗಮನಸೆಳೆದಿದೆ.

<><><><>

ನಾಳೆಯಿಂದ ಇದೇ ೨೮ರವರೆಗೆ ಗೋವಾದಲ್ಲಿ ೫೬ನೇ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ - ಐಎಫ್‌ಎಫ್‌ಐ ೨೦೨೫ ನಡೆಯಲಿದೆ. ಚಿತ್ರೋತ್ಸವದಲ್ಲಿ ೮೧ ದೇಶಗಳ ೨೪೦ ಚಲನಚಿತ್ರಗಳು ಪ್ರದರ್ಶನಗೊಳ್ಳಲಿದ್ದು, ಇದು ವಿಭಿನ್ನ ದೇಶಗಳ ನಡುವೆ ಸಾಂಸ್ಕೃತಿಕ ಸೇತುವೆಯಾಗಿ ಕಾರ್ಯ ನಿರ್ವಹಿಸುತ್ತಿರುವ ಜೊತೆಗೆ ಭಾರತೀಯ ಸಿನಿಮಾಕ್ಕೆ ಜಾಗತಿಕ ವೇದಿಕೆಯನ್ನು ಒದಗಿಸುತ್ತದೆ. ಕೃತಕ ಬುದ್ಧಿಮತ್ತೆ ಆಧರಿತ ವಿಷಯಕ್ಕಾಗಿ ಮೀಸಲಾದ ವಿಭಾಗದೊಂದಿಗೆ ಐಎಫ್‌ಎಫ್‌ಐ ಹೊಸ ತಂತ್ರಜ್ಞಾನಗಳನ್ನು ಸಹ ಸಂಯೋಜಿಸುತ್ತದೆ. ಜಾಗತಿಕ ಚಲನಚಿತ್ರ ನಿರ್ಮಾಪಕರಿಗೆ ತಮ್ಮ ಚಲನಚಿತ್ರಗಳನ್ನು ಭಾರತ ಮಾತ್ರವಲ್ಲದೆ, ಪ್ರಪಂಚದಾದ್ಯಂತದ ಸಿನಿಪ್ರಿಯರಿಗೆ ಪ್ರದರ್ಶಿಸಲು ಅವಕಾಶಗಳನ್ನು ಕಲ್ಪಿಸುತ್ತದೆ. ಪ್ರಧಾನಿ ನರೇಂದ್ರ ಮೋದಿ ಅವರ 'ನಾರಿ ಶಕ್ತಿ' ಆಶಯಕ್ಕೆ ಅನುಗುಣವಾಗಿ, ಈ ವರ್ಷ ಮಹಿಳೆಯರು ನಿರ್ದೇಶಿಸಿದ ೫೦ಕ್ಕೂ ಹೆಚ್ಚು ಚಲನಚಿತ್ರಗಳನ್ನು ಪ್ರದರ್ಶಿಸಲಾಗುವುದು. ಸ್ವಾತಂತ್ರ್ಯದ ೭೫ನೇ ವರ್ಷಾಚರಣೆ ಹಿನ್ನೆಲೆಯಲ್ಲಿ ಕಳೆದ ವರ್ಷ ೭೫ ಯುವ ಮನಸ್ಸುಗಳಿಗೆ ಈ ಉತ್ಸವದಲ್ಲಿ ವೇದಿಕೆ ಕಲ್ಪಿಸಲಾಗಿತ್ತು. ಈಗ ಅದರ ಸಂಖ್ಯೆಯನ್ನು ೧೨೦ಕ್ಕೆ ಏರಿಸಲಾಗಿದೆ.

<><><><>

ಬಾಹ್ಯಾಕಾಶ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವಿಕೆ ಮತ್ತು ಹೂಡಿಕೆಗೆ ಭಾರತವು ಆದ್ಯತೆಯ ಜಾಗತಿಕ ತಾಣವಾಗಿ ವೇಗವಾಗಿ ಹೊರಹೊಮ್ಮುತ್ತಿದೆ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಜಿತೇಂದ್ರ ಸಿಂಗ್ ಹೇಳಿದ್ದಾರೆ. ದೆಹಲಿಯಲ್ಲಿ ನಿನ್ನೆ ನಡೆದ ಭಾರತ ಅಂತಾರಾಷ್ಟ್ರೀಯ ಬಾಹ್ಯಾಕಾಶ ಸಮಾವೇಶದಲ್ಲಿ ಅವರು, ಸರ್ಕಾರದ ಸುಧಾರಣಾ ಕ್ರಮಗಳು, ಭಾರತದ ಬಾಹ್ಯಾಕಾಶ ಆರ್ಥಿಕತೆಯ ಭವಿಷ್ಯವನ್ನು ರೂಪಿಸಲು ಪ್ರತಿಭೆ, ತಂತ್ರಜ್ಞಾನ ಮತ್ತು ಹೂಡಿಕೆಯನ್ನು ಒಮ್ಮುಖಗೊಳಿಸುವ ಪರಿಸರ ವ್ಯವಸ್ಥೆಯನ್ನು ಸೃಷ್ಟಿಸಿವೆ ಎಂದು ತಿಳಿಸಿದರು.

<><><><>

ಕೇಂದ್ರ ಗ್ರಾಹಕ ವ್ಯವಹಾರಗಳ ಇಲಾಖೆ ಆರಂಭಿಸಿರುವ ಇ- ಜಾಗೃತಿ ವೇದಿಕೆ ಪಾರದರ್ಶಕತೆ ಮತ್ತು ದಕ್ಷತೆಗೆ ದೇಶದಲ್ಲಿ ಮಾತ್ರವಲ್ಲದೆ, ವಿದೇಶದಲ್ಲೂ ಗಮನ ಸೆಳೆದಿದ್ದು, ಅನಿವಾಸಿ

ಭಾರತೀಯ ಗ್ರಾಹಕರ ಹಿತರಕ್ಷಣೆಯಲ್ಲೂ ಕ್ರಾಂತಿಗೆ ನಾಂದಿ ಹಾಡಿದೆ. ಗ್ರಾಹಕರ ಹಕ್ಕುಗಳಿಗೆ ಪ್ರಥಮ ಪ್ರಾಶಸ್ತ್ಯ ನೀಡುತ್ತಿದ್ದು, ಡಿಜಿಟಲ್ ಇಂಡಿಯಾದ ಶ್ರೇಷ್ಠ ಪರಿಹಾರ ವ್ಯವಸ್ಥೆಯಾಗಿ ಹೊರಹೊಮ್ಮಿದೆ. ಡಿಜಿಟಲ್ ವಂಚನೆ, ಡಿಜಿಟಲ್ ಅರೆಸ್ಟ್ ನಂತಹ ಆತಂಕದ ದಿನಗಳಲ್ಲಿ ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ್ ಜೋಶಿ ಅವರ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ ಇ- ಜಾಗೃತಿ ವೇದಿಕೆ ಗ್ರಾಹಕರ ಹಕ್ಕು ರಕ್ಷಣೆಗೆ ಬದ್ಧವಾಗಿದೆ. ಅನಿವಾಸಿ ಭಾರತೀಯರಿಗೂ ನ್ಯಾಯ ಪರಿಹಾರ ಕಲ್ಪಿಸುವಲ್ಲಿ ದಕ್ಷತೆ ಮೆರೆದಿದೆ. ಅನಿವಾಸಿ ಭಾರತೀಯರು ಭಾರತಕ್ಕೆ ಪ್ರಯಾಣಿಸದೆ ವಿಮಾನ ಹಕ್ಕುಗಳು ಮತ್ತು ಉತ್ಪನ್ನ ದೋಷಗಳ ವಿವಾದವನ್ನು ಇತ್ಯರ್ಥಪಡಿಸಲು ಈ ವೇದಿಕೆ ಸಹಕಾರಿಯಾಗಿದೆ. ಈ ತಿಂಗಳ ೧೩ರವರೆಗೆ ಏಕೀಕೃತ ಪೋರ್ಟಲ್ ಅಡಿ ೧ ಲಕ್ಷದ ೨೭ ಸಾವಿರದ ೫೮ ಪ್ರಕರಣಗಳನ್ನು ಪರಿಹರಿಸಿದೆ.

<><><><>

ಇನ್ಸ್ಟಿಟ್ಯೂಟ್ ಆಫ್ ಏರೋಸ್ಪೇಸ್ ಮೆಡಿಸಿನ್-ಐಎಎಂ ಬೆಂಗಳೂರಿನಲ್ಲಿ ಇಂಡಿಯನ್ ಸೊಸೈಟಿ ಆಫ್ ಏರೋಸ್ಪೇಸ್ ಮೆಡಿಸಿನ್ ನ ೬೪ನೇ ವಾರ್ಷಿಕ ಸಮ್ಮೇಳನವನ್ನು ಆಯೋಜಿಸಲಿದೆ. ಎರಡು ದಿನಗಳ ಸಮ್ಮೇಳನವನ್ನು ನಾಳೆ ವಾಯುಪಡೆಯ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಎಪಿ ಸಿಂಗ್ ಉದ್ಘಾಟಿಸಲಿದ್ದಾರೆ. ದೇಶಾದ್ಯಂತ ಮತ್ತು ವಿದೇಶಗಳಿಂದ ಸುಮಾರು ೩೦೦ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಡಿಆರ್‌ಡಿಒ ಪ್ರಯೋಗಾಲಯಗಳು ಮತ್ತು ಇಸ್ರೋದ ಪ್ರಮುಖ ವಿಜ್ಞಾನಿಗಳು ಸೇರಿದಂತೆ ಸಂಬಂಧಿತ ಸಂಸ್ಥೆಗಳ ಸಂಶೋಧಕರು ಭಾಗವಹಿಸಲಿದ್ದಾರೆ. ದೇಶದಲ್ಲಿ ಏರೋಸ್ಪೇಸ್ ಔಷಧ ಸಂಶೋಧನೆ ಮತ್ತು ನೀತಿ ನಿರೂಪಣೆಯ ಭವಿಷ್ಯವನ್ನು ರೂಪಿಸುವ ಗುರಿ ಹೊಂದಿರುವ ಬಲವಾದ ಕಾರ್ಯಸೂಚಿ ಈ ಸಮ್ಮೇಳನ ಹೊಂದಿದೆ.

<><><><>

ಫೀಫಾ ವಿಶ್ವಕಪ್ ಫುಟ್‌ಬಾಲ್‌ಗೆ ಕೆರಿಬಿಯನ್ ದ್ವೀಪವಾದ ಕುರಾಕಾವೊ ಅರ್ಹತೆ ಪಡೆದ ಅತ್ಯಂತ ಚಿಕ್ಕ ರಾಷ್ಟ್ರವಾಗಿ ಇತಿಹಾಸ ನಿರ್ಮಿಸಿದೆ.  ಕಿಂಗ್‌ಸ್ಟನ್‌ನಲ್ಲಿ ಜಮೈಕಾ ವಿರುದ್ಧ ಡ್ರಾ ಸಾಧಿಸಿದ ನಂತರ ಕೇವಲ ೧ ಒಂದು ಲಕ್ಷದ ೫೬ ಸಾವಿರ ಜನರಿರುವ  ದ್ವೀಪದಾದ್ಯಂತ ಸಂಭ್ರಮಾಚರಣೆ ಮುಗಿಲು ಮುಟ್ಟಿತು. ನ್ಯಾಷನಲ್ ಸ್ಟೇಡಿಯಂನಲ್ಲಿ ೯೦ ನಿಮಿಷಗಳ ಕಾಲ ಕುರಾಕಾವೊ ಜಮೈಕಾದ ದಾಳಿಯನ್ನು ಚಾಕಚಕ್ಯತೆಯಿಂದ ಎದುರಿಸಿತು. ಜಮೈಕಾ ರಾಷ್ಟ್ರೀಯ ಫುಟ್‌ಬಾಲ್

ತಂಡವು ದ್ವಿತೀಯಾರ್ಧದಲ್ಲಿ ಉತ್ತಮ ಆಟ ಪ್ರದರ್ಶಿಸಿತು. ಆದರೂ ಕುರಾಕಾವೊದ ಆಟಗಾರರ ರಕ್ಷಣಾತ್ಮಕ ಆಟ ಮತ್ತು ದೃಢವಾದ ಶಿಸ್ತಿನಿಂದ ಪಂದ್ಯ ಸಮಬಲ ಸಾಧಿಸುವಂತಾಯಿತು. ಅಂತಿಮವಾಗಿ ಕುರಾಕಾವೊದ ಆಟಗಾರರು ವಿಶ್ವಕಪ್ ಗೆ ಪ್ರವೇಶ ದೊರೆತ ಹಿನ್ನೆಲೆಯಲ್ಲಿ ಸಂತಸದಿಂದ ಕುಣಿದು ಕುಪ್ಪಳಿಸಿದರು. ಜಮೈಕಾ ವಿರುದ್ಧ ಗೋಲುರಹಿತ ಡ್ರಾ ಸಾಧಿಸಿದರು. ಆರು ಪಂದ್ಯಗಳಿಂದ ೧೨ ಅಂಕಗಳೊಂದಿಗೆ ಬಿ ಗುಂಪಿನಲ್ಲಿ ಅಗ್ರಸ್ಥಾನವನ್ನು ಗಳಿಸಿತು. ಜಮೈಕಾಕ್ಕಿಂತ ಕುರಾಕಾವೊ ಒಂದು ಅಂಕ ಮುಂದಿರುವುದು ಸಹ ವಿಶೇಷವಾಗಿದೆ. ಮುಂದಿನ ವರ್ಷ ಫೀಪಾ ವಿಶ್ವಕಪ್ ನಲ್ಲಿ ೪೮ ತಂಡಗಳು ಪ್ರಶಸ್ತಿಗಾಗಿ ಸೆಣಸಲಿವೆ. ತನ್ಮೂಲಕ ಉದಯೋನ್ಮುಖ ಫುಟ್‌ಬಾಲ್ ರಾಷ್ಟ್ರಗಳಿಗೆ ಅವಕಾಶಗಳು ತೆರೆದಿವೆ, ಆದರೆ ಕುರಾಕಾವೊದ ಸಾಧನೆ ನಿಜಕ್ಕೂ ಎಲ್ಲರಿಗೂ ಪ್ರೇರಣೆಯಾಗಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>